Felicitations to the Deputy Speaker

ಶ್ರೀ ಬಿ. ಭಾಸ್ಕರಶೆಟ್ಟಿ.—ಸ್ವಾಮಿ, ಈಗ ಆಯ್ಕೆಯಾದ ಉಪಾಧ್ಯಕ್ಷರು ಅವರ ಜಿಲ್ಲೆಯವರು ಎಂದು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಎಷ್ಟು ಪ್ರೀತಿ ಇದೆ. ಈ ಕಾರಣದಿಂದಲೇ ಅವರು ಹೊರಗೆ ಹೋಗಿದ್ದವರು ಕೂಡಲೇ ಒಳಗೆ ಬಂದರು.

(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರೆಲ್ಲರೂ ಸಭೆಯೊಳಕ್ಕೆ ಬಂದರು)

† SRI D DEVARAJ URS (Chief Minister).—Sir, I would like to congratulate the Hon'ble Deputy Speaker, Mrs Sumathi Madiman who hails from Dharwar Rural Constituency. I am cangratulating not only on my behalf but also on behalf of the entire House. When I say, the entire House, it includes the Opposition Leader and other Opposition Members also. Although they staged a walk-out, I think, it is not in protest against the choice of the lady Member, but perhaps, as they put it, they did not like the attitude of the Government. Alright. I take in that way. If they did not like, they have got the right to protest. I leave it at this juncture. Neverth less I am very happy that when they saw the Deputy Speaker was being elected, they immediately come in show their respect as well as to express their good sentiments to the newly elected Deputy Speaker. Luckily, we are all very happy again, since the candidate happens to be a lady Member. In the last Assembly, we had a lady Speaker and it became a matter of joy and pride to this House as well as to the people of Karnataka and outside also, Everybody appreciated it. Now at least, fortunately, we have had another opportunity of electing a lady Member as Deputy Speaker, if not as a Speaker. Smt. Madiman as a Member of this house, in the last Assembly, as well as in this Assembly, is known to be a very consic entious Member of this House. She is also know to be a member who has been taking lively interest not only in the debates in the House, but also in the work of her Constituency.

Sir, I am aware, when she was asked to contest for the second time, from the same Constituency, many people expressed doubts as to her success. But I was confident because, I knew the way in which she used conduct herself as representative of the people. I was aware she was doing the work of her Constituency in a very satisfactory manner. In the ultimate, analysis, her success proved that she has done really good work. She has endeared hereself with her Constituency people and hence she was able to get elected and returned from one and the same Constituency. Again, her success in the election also marked another number, *viz.* She has been able to win for the second time also. There is one kind of analysis in politics. Unless there is a caste support in the Constituency it would not be possible to get elected. If by chance one got elected for the first time, it may not be possible to win for the second time. But that theory has been

disproved long back and particularly, Smt. Madiman, after she got returned for the second time, she has established once for all, that irrespective of caste or creed, one is able to win by doing service and hard-work. One could return from the Constituency without the backing of caste or any other backing.

Occasionally, when she was asked to preside over, in the absence of the Speaker, the impression in the House was that she was able to manage and conduct the affairs of the House in a very very satisfactory manner, as if she was an experienced person in the job. That is what I got from many Members and sometimes, even from some Members from the Opposition too. Therefore, while making this choice we all felt that since we have an able person not only as a legislator, but also in talents, courage and vision, we selected her for the post of Deputy Speaker.

So, Sir, once again I am very happy that we have elected her as Deputy Speaker and I assure on behalf of my party as well as the House that we will have extra-consideration for the lady Deputy Speaker. In a way, Sir, the turbulence now and then exhibited in this House perhaps will automatically get silienced in deference to the opposite sex. The Members of the House, will I think twice before taking up such turbulent postures or attitudes. So Sir I wish the Deputy Speaker well and success in her endeavour, Tank you, Sir.

3-30 P. M.

S. R. BOMMAI (Hubli).—Mr. Speaker, Sir, as already stated by me the walk out was in protest against the attitude of the Government and not against the person who is elected. It is a matter of pride for me because she comes from my City-Hubli City. Secondly, I know her from her chilhood and I also know her parental family and the family she is married to. Her husband is a personal friend of mine. She hails from a very cultural, educated and progressive family. Her father-in-law is a great man and a very reputed man. In spite of her family responsibilities she has been taking keen interest in social work particularly in Development and benefit schemes of children and upliftment of women ; in Hubli and round about, she has beeing doing good work. I have know her when she was not a Legislator. Most of her time she was moving about in slums and labour areas organising the backward people and trying to get benifits of all the schemes to them. She has been taking keen interest in their welfare. In 1972 when she was elected to the Assembly she exhibited her qualities as a good Legislator and social worker. We have seen her as the Chairman of the Estimates Committee. She conducted in an efficient manner and one of the best reports has been produced. Particulary, when she occupied the Chair, she has exhibited her qualities to control the

House. She controls the members in a very fitting manner whenever necessary. So far as the Deputy Speaker is concerned, we are sure about her capacity so far as the controlling the deliberations of the House are concerned. I would like to assure on behalf of the members of the Opposition and also on behalf of all of us that there will be abundant co-operation in the deliberations whenever she presides. When you elected the present Speaker I congratalated the Government for electing a person from the Scheduled Castes and now you have recognised the rights of the weaker section.

SMT. S. PRAMILA.—I am on a Point of Order, ನಮ್ಮ ನಾಯಕರು ವೀಕರ್ ಸೆಕ್ಷನ್ ಎಂದು ಯಾವ ದೃಷ್ಟಿಕೋನದಲ್ಲಿ ಹೇಳಿದರು ಎಂಬುದು ಅರ್ಥವಾಗಲ್ಲಿಲ್ಲ, ಅವರು ವೀಕರ್ ಸೆಕ್ಸ್ ಎಂದರೋ ಅಥವಾ ವೀಕರ್ ಸೆಕ್ಷನ್ ಎಂದು ಹೇಳಿದರೋ ಎಂಬುದನ್ನು ಸ್ಪಷ್ಟೀಕರಣ ಮಾಡಿ ಕೊಳ್ಳಬೇಕಾಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ವೀಕರ್ ಸೆಕ್ಷನ್ ಎಂದು ಯಾವ ಅರ್ಥದಲ್ಲಿ ಹೇಳಿದೆ ಅಂದರೆ, ಅವರಿಗೆ ಏನು ನಾರಮ್ಸ ಸಿಕ್ಕಬೇಕೋ ಅದು ಸಿಕ್ಕಿಲ್ಲ ಎಂಬ ಅರ್ಥದಲ್ಲಿ ಹೇಳಿದೆ.

The ladies constitute more than 50 per cent but they are not having proportional representation in administrative posts, or Cabinet or in the Legislature.

SRI D. DEVARAJ URS.—Biologically, it is proved that women are not weaker sex. They are weaker section ; that is what the hon'ble member meant.

SRI S. R. BOMMAI.—Representation has been given both from the Scheduled Castes and the ladies. I welcome the election and express my full support.

† ಶ್ರೀ ಟಿ. ಆರ್. ಶಾಮಣ್ಣ (ಬಸವನಗುಡಿ).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಶ್ರೀಮತಿ ಮಡಿವಾಳ ಅವರು ಈ ಸಭೆಯ ಡೆಪ್ಯುಟಿ ಸ್ಪೀಕರ್ ಆಗಿರತಕ್ಕದ್ದು ನಮ್ಮೆಲ್ಲರಿಗೂ ಸಂತೋಷದ ವಿಚಾರ. ಈ ಮನೆಯಲ್ಲಿ ಮುಖ್ಯ ಮಂತ್ರಿಗಳಿಗೆ ಬಹುಮತ ಇರುವುದರಿಂದ ಅವರಿಗೆ ಯಾರು ಬೇಕೋ ಅವರನ್ನು ಚುನಾಯಿಸುವುದು ನನಗೆ ಗೊತ್ತಿದೆ. ಆದರೂ ಕೂಡ ಒಂದು ಡೆಪ್ಯುಟಿ ಸ್ಪೀಕರ್ ಸ್ಥಾನ, ಒಂದು ಸ್ಪೀಕರ್ ಸ್ಥಾನ ಪಾರ್ಟಿಯ ಒಂದು ಕಟ್ಟುನಿಟ್ಟಿಗೆ ಒಳಪಡದೇ ಒಂದು ಸ್ವತಂತ್ರವಾದ ಭಾಗ ಎಂದು ತಿಳಿದುಕೊಂಡು, ಈ ಎರಡು ಪಕ್ಷದವರು ಆ ಸ್ಥಾನದಲ್ಲಿ ಇರುವುದಕ್ಕೆ ಒಂದು ಅವಕಾಶ ಇರಬೇಕು ಎನ್ನುವ ಉದ್ದೇಶದಿಂದ ಸಾಂಕೇತಿಕವಾಗಿ ನಾನು ಸ್ಪರ್ಧಿಸಿದ್ದಾಯಿತು. ಇವ್ವೊತ್ತು ಡೆಪ್ಯುಟಿ ಸ್ಪೀಕರ್ ಸ್ಥಾನದಲ್ಲಿ ಕುಳಿತುಕೊಳ್ಳತಕ್ಕ ಸ್ಥಾನ ಹೋಯಿತು ಅಥವಾ ಆ ಸ್ಥಾನ ಸಿಕ್ಕಲಿಲ್ಲ ಅನ್ನುವುದಕ್ಕಿಂತಲೂ ಜನ ಸೇವೆ ಮಾಡತಕ್ಕಂತಹ ಸ್ಥಾನ ಉಳಿದುಕೊಂಡಿದೆ ಎಂದು ನಾನು ಸಂತೋಷಪಡುತ್ತಿದ್ದೇನೆ. ಶ್ರೀಮತಿ ಮಡಿವಾಳ ಅವರು ಒಳ್ಳೆಯ ಸಂಪ್ರದಾಯವನ್ನು ಹಾಕಿ ಈ ಸಭೆಯನ್ನು ಚೆನ್ನಾಗಿ ನಡೆಸಲಿಕ್ಕೆ ಮಾರ್ಗದರ್ಶನ ಮಾಡುತ್ತಾರೆಂದು ನಾನು ಅವರಿಗೆ ಶುಭಾಶಯಗಳನ್ನು ಕೋರುತ್ತೇನೆ.

† ಶ್ರೀ ಬಿ. ವಿ. ಕಕ್ಕಿಲಾಯ (ವಿಠ್ಠಲ್).—ಮಾನ್ಯ ಅಧ್ಯಕ್ಷರೇ, ಈ ಘನ ಸದನದ ಅಧ್ಯಕ್ಷ ಪೀಠವನ್ನು ಅಲಂಕರಿಸಲಿಕ್ಕೆ ಶ್ರೀಮತಿ ಸುಮತಿ ಮಡಿವಾಳರವರನ್ನು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಿರುವುದು ನಮಗೆಲ್ಲರಿಗೂ ಹೆಮ್ಮೆಯ ವಿಚಾರ. ಅವರಿಗೆ ನನ್ನ ಪರವಾಗಿ ಮತ್ತು ನನ್ನ ಪಕ್ಕದಲ್ಲಿರುವ ಶ್ರೀಮಾನ್ ಆರ್ಮುಗಂರವರಿಗೆ ಮಾತನಾಡಲಿಕ್ಕೆ ತೊಂದರೆಯಾಗಿರುವುದರಿಂದ ಅವರ ಪರವಾಗಿ ಶುಭಾಶಯಗಳನ್ನು ಅರ್ಪಿಸುತ್ತೇನೆ. ಶ್ರೀಮತಿ ಸುಮತಿ ಮಡಿವಾಳರವರು ಕಳೆದ ಆರು ವರ್ಷಗಳಿಂದ ಈ ಸಭೆಯ ಸದಸ್ಯರಾಗಿದ್ದುಕೊಂಡೇ ಈ ಸದನದ ಕಾರ್ಯಕಾಲಪಗಳನ್ನು ಅಧ್ಯಕ್ಷ ಸ್ಥಾನದಲ್ಲಿ ಕೂತ

ಜವಾಬ್ದಾರಿಯಿಂದ ಅನೇಕ ಬಾರಿ ನಿರ್ವಹಿಸಿದ್ದಾರೆ. ನಮಗೆಲ್ಲರಿಗೂ ಸುಮತಿ ಮಡಿಮನ್‌ರವರು ಅಧ್ಯಕ್ಷ ಪೀಠದಲ್ಲಿದ್ದಾಗ ಮಾನ್ಯ ಸದಸ್ಯರುಗಳು ಯಾವ ಅಡೆತಡೆಯಿಲ್ಲದೆ ತಮ್ಮ ಭಾಷಣಗಳನ್ನು ಬಿಚ್ಚು ಮನಸ್ಸಿನಿಂದ ಹೇಳುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಇವತ್ತು ನಾವು ಇದನ್ನು ಸ್ಮರಿಸಬೇಕಾಗಿದೆ. ಮಹಿಳೆಯವರು ಸೂಕ್ಷ್ಮ ಮನಸ್ಸಿನವರು; ನಾವು ಏನಾದರೂ ಸ್ವಲ್ಪ ಚರ್ಚೆಯು ಉದ್ವೇಗದಲ್ಲಿ ಸ್ವಲ್ಪ ಕಠಿಣವಾಗಿ ವರ್ತಿಸಿದರೂ ಕೂಡ, ಅವರ ಮನಸ್ಸಿಗೆ ನೋವಾಗಿದ್ದರೂ, ಅವರ ಒಂದು ಕೋಮಲ ಮನಸ್ಸಿನಿಂದ ಅಧ್ಯಕ್ಷ ಪೀಠದಲ್ಲಿ ಕೂತು ಬಹಳ ಒಳ್ಳೆಯ ರೀತಿಯಲ್ಲಿ ಸಭೆಯನ್ನು ನಡೆಸಿಕೊಂಡು ಹೋಗಿದ್ದಾರೆ. ಎರಡು ಕಡೆಯ ಸದಸ್ಯರುಗಳಿಗೂ ಕೂಡ ಸಾಕಷ್ಟು ಕಾಲಾವಕಾಶ ಕೊಟ್ಟುಕೊಂಡು ಹೋಗಿದ್ದಾರೆ. ಅವರು ಉತ್ತಮ ಸಮಾಜ ಕಾರ್ಯಕರ್ತೆಯೆಂದು ವಿರೋಧ ಪಕ್ಷದ ನಾಯಕರಿಂದ ಮತ್ತು ಆ ಭಾಗದಿಂದ ಬಂದಿರತಕ್ಕ ಸದಸ್ಯರಿಂದ ಕೇಳಿ ತಿಳಿದುಕೊಂಡಿದ್ದೇವೆ. ಅಂತಹವರು ಉಪಾಧ್ಯಕ್ಷರಾದ ಮೇಲೆ ಸಾಮಾನ್ಯವಾಗಿ ಚರ್ಚೆಯಲ್ಲಿ ಸಹ ಭಾಗವಹಿಸಬಹುದು ಎಂಬುದನ್ನು ನಾನು ರಾಜ್ಯ ಸಭೆಯಲ್ಲಿದ್ದಾಗ ತಿಳಿದುಕೊಂಡಿದ್ದೇನೆ. ಸುಮತಿ ಮಡಿಮನ್‌ರವರು ಈ ಸದನದ ಕಾರ್ಯಕಲಾಪಗಳಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಿದ್ದಾರೆ. ಸಾಮಾನ್ಯವಾಗಿ ಉಪಾಧ್ಯಕ್ಷರಾದ ಮೇಲೆ ಸದನದ ಚರ್ಚೆಯಲ್ಲಿ ಭಾಗವಹಿಸುವುದಕ್ಕಾಗುವುದಿಲ್ಲ ಎನ್ನುವ ಭೀತಿ ಸ್ವಾಭಾವಿಕವಾಗಿ ಬರುತ್ತೆ. ಉಪಾಧ್ಯಕ್ಷರು ಕಾರ್ಯಕಲಾಪಗಳಲ್ಲಿ ಭಾಗವಹಿಸಬಹುದು; ಅಧ್ಯಕ್ಷರು ಮಾತ್ರ ಚರ್ಚೆಗಳಲ್ಲಿ ಭಾಗವಹಿಸುವುದಿಲ್ಲ. ತಾವುಗಳು ಉಪಾಧ್ಯಕ್ಷರಾದ ಮೇಲೆ ಈ ಸದನದ ಕಾರ್ಯಕಲಾಪಗಳನ್ನು ಕಡೆಗಣಿಸದೇ ಈ ಸದನದ ಚರ್ಚೆಗಳಲ್ಲಿ ತಾವು ಭಾಗಿಗಳಾಗಿ ಉತ್ತಮವಾದ ಸಂಪ್ರದಾಯವನ್ನು ಹಾಕಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಮತ್ತೆ ತಾವು ಉಪಾಧ್ಯಕ್ಷರಾಗಿ ಆಯ್ಕೆಯಾಗಿ ಬಂದಿರುವುದಕ್ಕಾಗಿ ವೈಯಕ್ತಿಕವಾಗಿ ನನ್ನ ಅಭಿನಂದನೆಗಳನ್ನು ಮತ್ತು ಶುಭಾಶಯಗಳನ್ನು ಸಲ್ಲಿಸುತ್ತೇನೆ.

† ಶ್ರೀಮತಿ ಎಸ್. ಪ್ರಮೀಳ (ಚಾಮರಾಜ ಪೇಟೆ).—ಮಾನ್ಯ ಅಧ್ಯಕ್ಷರೇ, ನಿನ್ನೆ ಮೊನ್ನೆ ಕರ್ನಾಟಕದಲ್ಲಿ ಪಂಚಮಿ ಹಬ್ಬ ಮಾಡಿ, ಪಂಚಮಿ ಉಂಡೆ ತಿಂದರೂ ಕೂಡ ನಮಗೆ ಸಂತೋಷ ಆಗಿರಲಿಲ್ಲ; ಇವತ್ತು ಶ್ರೀಮತಿ ಸುಮತಿ ಮಡಿಮನ್‌ರವರನ್ನು ಉಪಾಧ್ಯಕ್ಷರನ್ನಾಗಿ ಮಾಡಿರುವುದರಿಂದ ಅಖಿಂಡ ಕರ್ನಾಟಕದ ಎಲ್ಲಾ ಹೆಣ್ಣು ಮಕ್ಕಳ ಪರವಾಗಿ ಶುಭಾಶಯಗಳನ್ನು ಈ ಮೂಲಕ ಸಲ್ಲಿಸುತ್ತೇನೆ. ಮುಖ್ಯ ಮಂತ್ರಿಗಳು ಮತ್ತು ವಿರೋಧ ಪಕ್ಷದ ನಾಯಕರು ವೀಕರ್‌ಸೆಕ್ಷನ್ ಎಂದು ಒಂದು ಮಾತನ್ನು ಹೇಳಿದರು. ಮಹಿಳೆಯರು ವೀಕರ್‌ಸೆಕ್ಷನ್ ಎಂದು ಇಬ್ಬರೂ ಕೂಡ ಸಾರ್ವಜನಿಕವಾಗಿ ಒಪ್ಪಿಕೊಂಡಿದ್ದಾರೆ. ನಾನು ಅದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ; ಆದರೆ, ಈ ಸಂದರ್ಭದಲ್ಲಿ ನಮ್ಮ ನಾಯಕರುಗಳು ವೀಕರ್ ಸೆಕ್ಷನ್ ಎಂದು ಒಪ್ಪಿಕೊಂಡಿರುವಾಗ ಅಖಿಂಡ ಕರ್ನಾಟಕದಲ್ಲಿರತಕ್ಕ ಹೆಣ್ಣು ಮಕ್ಕಳ ಹಿತರಕ್ಷಣೆಗಾಗಿ ಒಂದು ಕಮೀಷನ್ ಅಪಾಯಿಂಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಪ್ರಕೃತಿ ಮತ್ತು ಪುರುಷ ಒಂದಕ್ಕೊಂದು ಪೂರಕವಾಗಿರುತ್ತದೆ. ಅದೇರೀತಿ ನಮ್ಮ ರಾಜ್ಯದಲ್ಲಿ ಪುರುಷರೊಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ; ಮಹಿಳೆಯೊಬ್ಬರನ್ನು ಉಪಾಧ್ಯಕ್ಷರನ್ನಾಗಿ ಮಾಡಿದ್ದೀರಿ. ಅದೇರೀತಿ ನಮ್ಮ ರಾಜ್ಯಕ್ಕೆ ಪುರುಷರೊಬ್ಬರು ಮುಖ್ಯ ಮಂತ್ರಿಯಾಗಿದ್ದಾರೆ; ಮಹಿಳೆಯೊಬ್ಬರನ್ನು ಮುಖ್ಯ ಕಾರ್ಯದರ್ಶಿಯನ್ನಾಗಿ ಮಾಡುವುದರ ಮೂಲಕ ನಮ್ಮ ಮುಖ್ಯ ಮಂತ್ರಿಯವರು ತಮ್ಮ ಧೀಮಂತ ತನವನ್ನು ತೋರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲದೆ ರಾಜ್ಯದ ಮಂತ್ರಿಮಂಡಲದಲ್ಲಿ ಮಹಿಳೆಯೊಬ್ಬರನ್ನು ಸಚಿವ ಸಂಪುಟ ದರ್ಜೆಯ ಸಚಿವರನ್ನಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಸುಮತಿ ಮಡಿಮನ್‌ರವರ ಹೆಸರು ಅನ್ವರ್ಥನಾಮವಾಗುತ್ತದೆ, ''ಸು'' ಅಂದರೆ ಒಳ್ಳೆಯ, ''ಮತಿ''ಅಂದರೆ''ಬುದ್ಧಿ''ಹೀಗೆ ಒಳ್ಳೆಯ ಅನ್ವರ್ಥ ಹೆಸರನ್ನು ಸರಿಯಾಗಿ ಇಟ್ಟಿದ್ದಾರೆ. ಇದು ಒಂದು ಶುಭ ಲಕ್ಷಣ ಎಂದು ಹೇಳುತ್ತೇನೆ. ಇವರು ಬಹಳ ಸರಳ ಜೀವಿಗಳು. ಕೆಟ್ಟ ಮಗ ಹುಟ್ಟಬಹುದು, ಕೆಟ್ಟ ಮಾತೆ ಹುಟ್ಟುವುದಿಲ್ಲ. ಶ್ರೀಮತಿ ಸುಮತಿ ಮಡಿಮನ್‌ರವರು ಉಪಾಧ್ಯಕ್ಷರಾಗಿರತಕ್ಕಂಥ ಕಾಲದಲ್ಲಿ ಈ ಸದನದಲ್ಲಿ ನಮ್ಮನ್ನು ಮಂಕ್ಕಳು ಎಂದು ಭಾವಿಸಿ ವಿರೋಧಪಕ್ಷದವರಾಗಿರಲೀ, ಆ ಕಡೆಯವರಾಗಿರಲೀ ಇಬ್ಬರನ್ನೂ ಕೂಡ ಒಂದೇ ವಿಧದಲ್ಲಿ ಮಾತೆಯಾಗಿ ನೋಡುವಂತ ಪರಿಪಕ್ವತೆ ಅವರಲ್ಲಿ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಶ್ರೀಮತಿ ಸುಮತಿ ಮಡಿಮನ್‌ರವರು ಇಡೀ ಅವರ ಕ್ಷೇತ್ರದಲ್ಲಿ ಜನಾನುರಾಗಿಗಳಾಗಿದ್ದಾರೆ. ಅವರು ಅವರ ಕ್ಷೇತ್ರದಲ್ಲಿ ತಮ್ಮ ಸ್ವಂತ ಶಕ್ತಿಯಿಂದ ೪೨ ಸ್ಕೂಲುಗಳನ್ನು ತೆರೆದಿದ್ದಾರೆ, ಅಷ್ಟೆ ಅಲ್ಲ. ಇಡೀ ಕ್ಷೇತ್ರದ ಹಳ್ಳಿ ಹಳ್ಳಿಯ ಪರಿಚಯ ಅವರಿಗೆ ಇದೆ. ಮೊನ್ನೆ ಅವರು ವಿಧಾನ ಸೌಧದಲ್ಲಿ ಕೆಲಸ ಮಾಡುವ ಹೆಣ್ಣು ಮಕ್ಕಳ ಒಂದು ಸಂಘಟನೆ ಮಾಡಬೇಕು, ಅವರ ಒಂದು

ಕಷ್ಟ ಸುಖಗಳನ್ನು ತಿಳಿಯಬೇಕು ಎನ್ನುವ ದೃಷ್ಟಿಯಿಂದ ಪ್ರಯತ್ನ ಮಾಡುತ್ತಿದ್ದಾರೆ. ಆದ್ದರಿಂದ ಹೆಣ್ಣು ಮಕ್ಕಳ ಒಂದು ಪ್ರೋತ್ಸಾಹ ಪೆಚ್ಚಿನ ಮಾಟ್ಟದಲ್ಲಿ ಇವರಿಗೆ ಇನಿ ಎಂದು ಹೇಳುತ್ತೇನೆ. ಸುಮತಿ ಮಡಿಮನ್‌ರವರು ಗಂಡು ಮಕ್ಕಳು ಹಾಗೂ ಹೆಣ್ಣು ಮಕ್ಕಳನ್ನು ಸರ್ವೇ ಸಮಾನ್ಯವಾಗಿ ಒಂದೇ ರೀತಿ ನೋಡಿಕೊಳ್ಳುತ್ತಾರೆಂಬ ಭಾವನೆ ಇಟ್ಟುಕೊಂಡು ಕರ್ನಾಟಕದಲ್ಲಿರತಕ್ಕ ಹೆಣ್ಣುಮಕ್ಕಳ ಪರವಾಗಿ ನಾನು ಅವರಿಗೆ ಶುಭಾಷಯಗಳನ್ನು ಅರ್ಪಿಸುತ್ತೇನೆ. ಅವರಿಗೆ ನಮ್ಮ ಸಂಪೂರ್ಣ ಬೆಂಬಲ ಕೊಡುವುದಕ್ಕೆ ನಾನು ಆಶಿಸುತ್ತೇನೆ. ಶ್ರೀಮತಿ ಸುಮತಿ ಮಡಿಮನ್‌ರವರ ಹೆಸರನ್ನು ಸೂಚಿಸಿದಾಗ ನಾವು ಹೊರಗೆ ಹೋಗಿದ್ದು ಇವರಿಗೆ ವಿರುದ್ಧವಾಗಿ ಅಲ್ಲ, ಪಕ್ಷದ ದೃಷ್ಟಿಯಿಂದ, ಏಕೆಂದರೆ ವ್ಯಕ್ತಿಗಿಂತ ಪಕ್ಷ ದೊಡ್ಡದು, ಪಕ್ಷಕ್ಕಿಂತ ದೇಶ ದೊಡ್ಡದು. ಹೆಣ್ಣು ಮಗಳೊಬ್ಬಳನ್ನು ಉಪಾಧ್ಯಕ್ಷರನ್ನಾಗಿ ಮಾಡಿರುವುದಕ್ಕಾಗಿ ಶ್ರೀಮಾನ್ ಮುಖ್ಯ ಮಂತ್ರಿಯವರಿಗೂ ಮತ್ತು ತಮಗೆಲ್ಲರಿಗೂ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

† ಶ್ರೀ ವಿ. ಎ. ಮುತ್ತಿಗಟ್ಟಿ (ರೋಣ). – ಸನ್ಮಾನ್ಯ ಅಧ್ಯಕ್ಷರೇ, ಶ್ರೀಮತಿ ಸುಮತಿ ಮಡಿಮನ್ ರವರನ್ನು ಉಪಸಭಾಪತಿಗಳಾಗಿ ಆಯ್ಕೆ ಮಾಡಿರುವುದಕ್ಕೆ ನನಗೆ ಅತ್ಯಂತ ಆನಂದವಾಗಿರುತ್ತದೆ. ೧೯೭೧ನೇ ಇಸವಿಯಲ್ಲಿ ನಾನು ವಿದ್ಯಾರ್ಥಿ ನಾಯಕನಾಗಿದ್ದಾಗಿನಿಂದಲೂ ಶ್ರೀಮತಿ ಸುಮತಿ ಮಡಿಮನ್‌ರವರನ್ನು ನಾನು ಹತ್ತಿರದಲ್ಲಿ ನೋಡಿ ಅರ್ಥಮಾಡಿಕೊಂಡು ಬಂದಿರುತ್ತೇನೆ. ಅವರು ಯುವಕರ ಬಗ್ಗೆ ಅತ್ಯಂತ ಕಳಕಳಿ ಭಾವನೆಯನ್ನು ತಳೆದಂತಾವರಾಗಿರುತ್ತಾರೆ. ಹಲವಾರು ಸಲ ವಿದ್ಯಾರ್ಥಿ ಚಳುವಳಿ ನಡೆದಾಗ ನಮಗೆ ನಮ್ಮ ಸ್ನೇಹಿತರುಗಳಿಗೆ ಒಳ್ಳೆಯ ಮಾರ್ಗದರ್ಶನವನ್ನು ಮಾಡಿದ್ದಾರೆ. ಈ ಸಭೆಗೆ ಅವರನ್ನು ಈವತ್ತಿನ ದಿವಸ ಉಪಾಧ್ಯಕ್ಷರನ್ನಾಗಿ ಚುನಾಯಿಸಿದ್ದು ನಮ್ಮೆಲ್ಲರಿಗೂ ಅತ್ಯಂತ ಆನಂದವನ್ನು ತಂದಿರುತ್ತದೆ. ಅವರು ಯಾವುದೇ ಸ್ಥಾನದಲ್ಲಿ ಇರಲಿ, ಅತ್ಯಂತ ವ್ಯವಸ್ಥಿತವಾದ, ಅತ್ಯಂತ ದೃಢವಾಗಿ ಕೆಲಸ ಕಾರ್ಯಗಳನ್ನು ನಿರ್ವಹಿಸಿಕೊಂಡು ಬರತಕ್ಕಂಥ ಶಕ್ತಿ ಅವರಲ್ಲಿದೆ. ಅವರನ್ನು ಉಪಾಧ್ಯಕ್ಷರನ್ನಾಗಿ ಆರಿಸಿದಂಥ ಈ ಸಮಯದಲ್ಲಿ ನಮ್ಮ ಧಾರವಾಡ ಜಿಲ್ಲಾ ಜನತೆಯ ಪರವಾಗಿ ಮತ್ತು ಈ ಸಭೆಯ ಯುವಕ ಸದಸ್ಯರ ಪರವಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಅವರು ಅಧ್ಯಕ್ಷತೆ ವಹಿಸತಕ್ಕಂಥ ಕಾಲದಲ್ಲಿ ಹೊಸದಾಗಿ ಆರಿಸಿ ಬಂದಿರತಕ್ಕಂಥ ಯುವಕರಿಗೆ ಹೆಚ್ಚಿನ ಕಾಲಾವಕಾಶವನ್ನು ಭಾಷಣ ಮಾಡಲು ಕೊಡಬೇಕೆಂದು ಕೇಳಿಕೊಂಡು ಅವರನ್ನು ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಬಿ. ರಾಮಯ್ಯ (ಶೃಂಗೇರಿ).—ಸನ್ಮಾನ್ಯ ಅಧ್ಯಕ್ಷರೇ, ನೂತನವಾಗಿ ಈ ಸದನದ ಉಪ ಸಭಾಪತಿಗಳಾಗಿ ಚುನಾಯಿತರಾಗಿ ಬಂದಿರತಕ್ಕಂಥ ಶ್ರೀಮತಿ ಸುಮತಿ ಮಡಿಮನ್‌ರವರು ಧಾರವಾಡದವ ರಾದ್ದರಿಂದ ಮುಂಬೈ ಕರ್ನಾಟಕದವರ ಪರಿಚಯ ನನಗೆ ಸಾಕಷ್ಟು ಇಲ್ಲ. ನಾನು ಈಗತಾನೆ ಹೊಸದಾಗಿ ಈ ಸದನಕ್ಕೆ ಆಯ್ಕೆಯಾಗಿ ಬಂದಮೇಲೆ, ಅನೇಕರ ಪರಿಚಯವಾಯಿತು. ಶ್ರೀಮತಿ ಸುಮತಿ ಮಡಿಮನ್‌ರವರು ಈ ಸದನದಲ್ಲಿ ಆಗಿಂದಾಗ್ಗೆ ಅಧ್ಯಕ್ಷ ಸ್ಥಾನದಲ್ಲಿ ಕುಳಿತು ಅವರು ಈ ಮನೆಯ ಕಾರ್ಯ ಕಲಾಪಗಳನ್ನು ನಿರ್ವಹಿಸುತ್ತಿದ್ದಾಗ ಅವರು ತಳೆದ ದೃಷ್ಟಿ ಮಹತ್ವದ ದೃಷ್ಟಿಯಾಗಿರುತ್ತಿತ್ತು. ಎಲ್ಲಿ ಹೆಣ್ಣುಮಕ್ಕಳಿಗೆ ಗೌರವ ಸಲ್ಲುತ್ತದೋ ಅಲ್ಲಿ ದೇವರು ಸಂತೃಪ್ತಿಯನ್ನು ಪಡೆಯುತ್ತಾನೆ ಎನ್ನುವ ಮಾತು ಸರಿಯಾದುದಾಗಿರುತ್ತದೆ. ಅತ್ಯಂತ ಮಹತ್ವಪೂರ್ಣವಾದ ಮತ್ತು ವೈಶಿಷ್ಟ್ಯ ಪೂರ್ಣವಾದ ಈ ಸದನದಲ್ಲಿ ಶ್ರೀಮತಿ ಸುಮತಿ ಮಡಿಮನ್‌ರವರು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿ ಯುವಕರ ಬಗ್ಗೆ ಅತ್ಯಂತ ಮಹತ್ವ ಪೂರ್ಣವಾದ ಮಾರ್ಗದರ್ಶನವನ್ನು ನೀಡುತ್ತಾರೆಂಬ ಭರವಸೆಯನ್ನು ಹೊಂದಿ ಅವರಿಗೆ ನನ್ನ ಅಭಿನಂದನೆಯನ್ನು ಸಲ್ಲಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಸ್. ಅರಕೇರಿ (ಬಳ್ಳಿಗಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ಶ್ರೀಮತಿ ಸುಮತಿ ಮಡಿಮನ್ ರವರು ಡೆಪ್ಯೂಟಿ ಸ್ಪೀಕರ್‌ಆಗಿ ಆರಿಸಿಬಂದಿರತಕ್ಕಂಥಾದಕ್ಕೆ ನಿಜವಾಗಿಯೂ ಜನತಾ ಶಾಸಕಾಂಗ ಪಕ್ಷದ ಕಾರ್ಯದರ್ಶಿಯಾಗಿ ಅವರಿಗೆ ನನ್ನ ಶುಭಾಶಯಗಳನ್ನು ಅರ್ಪಿಸುತ್ತೇನೆ. ಶ್ರೀಮತಿ ಸುಮತಿ ಮಡಿಮನ್ ರವರು ಯಾವಾಗಲೂ ಬಹಳ ದಕ್ಷತೆಯಿಂದಲೂ ಮತ್ತು ನಿಷ್ಠೆಯಿಂದಲೂ ಕೆಲಸಕಾರ್ಯಗಳನ್ನು ಮಾಡಿ ಕೊಂಡು ಬಂದಿರುತ್ತಾರೆ. ಅವರು ವೈಯುಕ್ತಿವಾಗಿ ಬಹಳ ಶ್ರೀಮಂತ ಮನೆತನದಿಂದ ಬಂದವರಾದರೂ ಕೂಡ ಅವರು ಮಾಡತಕ್ಕಂಥ ಸೇವೆಯಲ್ಲಿ ಶ್ರೀಮಂತರೆಂಬ ಅಹಂಭಾವ ಇಲ್ಲ, ಮತ್ತು ಅವರು ಸರಳ ಮನೋಭಾವದಿಂದ ಕೂಡಿರುತ್ತಾರೆ. ಅವರು ಯಾವಾಗಲೂ ಹೆಚ್ಚಿನ ವೇಳೆಯನ್ನು, ಹೆಚ್ಚಿನ ಸಮಯ ವನ್ನು ಒಳ್ಳೆಯ ಕೆಲಸಕಾರ್ಯಗಳನ್ನು ಮಾಡುವುದರಲ್ಲಿ ವಿನಿಯೋಗಿಸಿ ಸರಳಜೀವನವನ್ನು ಮಾಡುತ್ತಾ ಬಂದಿರತಕ್ಕಂಥದ್ದು ನಿಜವಾಗಿಯೂ ಮಹತ್ವಪೂರ್ಣದ್ದಾಗಿರುತ್ತದೆ. ಕರ್ನಾಟಕ ಮುಖ್ಯ ಮಂತ್ರಿ

ಗಳಾದ ಶ್ರೀ ಡಿ. ದೇವರಾಜ ಅರಸರು ಪ್ರಪ್ರಥಮವಾಗಿ ಹಿಂದುಳಿದ ಜನಾಂಗದವರನ್ನು ಅಧ್ಯಕ್ಷರನ್ನಾಗಿ ಆರಿಸಿರುವುದರ ಜೊತೆಗೆ, ಎರಡನೆಯದಾಗಿ ಕರ್ನಾಟಕದ ಒಬ್ಬ ಮಹಿಳೆಯನ್ನು ಉಪಾಧ್ಯಕ್ಷರನ್ನಾಗಿ ಆರಿಸಿದ್ದು ನಿಜವಾಗಿಯೂ ಪ್ರಥಮ ದಾಖಲೆಯನ್ನು ನಿರ್ಮಿಸಿದ ಕೀರ್ತಿ ಅವರಿಗೆ ಸಲ್ಲತಕ್ಕಂಥದ್ದಾಗಿರುತ್ತದೆ. ಉಪಸಭಾಪತಿಗಳಾಗಿ ಆಯ್ಕೆಹೊಂದಿರುವ ಶ್ರೀಮತಿ ಸುಮತಿ ಮಡಿಮನ್ ನಮ್ಮ ಹತ್ತಿರದಲ್ಲೇ ಇದ್ದು ಕೊಂಡು ನಮ್ಮ ಪಕ್ಷದಬಗ್ಗೆ ಹೆಚ್ಚು ಕಾಳಜಿಯನ್ನು ಮತ್ತು ಕಳಕಳಿಯನ್ನು ತೋರಿಸಲೆಂದು ಕೇಳಿ ಕೊಂಡು, ಭಗವಂತನು ಅವರಿಗೆ ದೀರ್ಘಾಯುಷ್ಯವನ್ನು ಕರುಣಿಸಲೆಂದು ಪ್ರಾರ್ಥಿಸಿ ನನ್ನ ಮಾತುಗ ಳನ್ನು ಮುಗಿಸುತ್ತೇನೆ.

† ಶ್ರೀಮತಿ ಅನಸೂಯ ಜಿ. ಶರ್ಮಾ (ಅಂಕೋಲ).—ಮಾನ್ಯ ಅಧ್ಯಕ್ಷರೇ, ಈವತ್ತಿನ ದಿವಸ ನಮ್ಮ ಪಕ್ಷದವರಿಗೆ ಈ ಒಂದು ಅವಕಾಶ ಸಿಕ್ಕಲಿಲ್ಲವೆಂದು ಬೇಸರವಾಗುವುದು ಸಹಜವಾದರೂ, ಒಬ್ಬ ಮಹಿಳಾ ಅಭ್ಯರ್ಥಿಯವರಿಗೆ ಈ ಸ್ಥಾನ ಸಿಕ್ಕಿದ್ದು ನನಗೆ ತುಂಬಾ ಸಂತೋಷವಾಗಿದೆ. ಶ್ರೀಮತಿ ಸುಮತಿ ಮಡಿಮನ್ ಅವರ ಸ್ವಭಾವವನ್ನು ನಾವು ಚೆನ್ನಾಗಿ ಅರಿತುಕೊಂಡಿದ್ದೇವೆ. ನಮ್ಮ ಲೆಜಿಸ್ಲೇಚರ್ ಹೋಮ್‌ನಲ್ಲಿ ಒಂದೆರಡು ಪ್ರಸಂಗಗಳಲ್ಲಿ ಅವರು ನಡೆದುಕೊಂಡ ರೀತಿಯಲ್ಲಿ ಅವರಲ್ಲಿರುವ ದೊಡ್ಡ ಗುಣವನ್ನು ನೋಡಿದ್ದೇವೆ. ನಿಜವಾಗಿಯೂ ಇಂಥ ಒಂದು ಜವಾಬ್ದಾರಿಯ ಕೆಲಸಕ್ಕೆ ಅವರು ಯೋಗ್ಯ ರಾಗಿದ್ದಾರೆ. ಇಲ್ಲಿ ಪಕ್ಷಕ್ಕಿಂತ ವ್ಯಕ್ತಿ ಮುಖ್ಯ. ಪಕ್ಷ ಬೇರೆಯಾದರೂ ವ್ಯಕ್ತಿಬೇರೆಯಲ್ಲ, ಪಕ್ಷಕ್ಕಿಂತ ಜನರ ಸೇವೆಯನ್ನು ಮಾಡಬೇಕು ಎನ್ನುವ ಬುದ್ಧಿ ಅವರಲ್ಲಿದೆ. ಬೇರೆ ಪಕ್ಷದವರನ್ನೂ ಸಹಾನುಭೂತಿ ಯಿಂದ ನೋಡುವ ಒಂದು ದೊಡ್ಡ ಗುಣವನ್ನು ಅವರು ಹೊಂದಿರುತ್ತಾರೆ. ನನ್ನ ಮಟ್ಟಿಗೆ ಹೇಳುವು ದಾದರೆ ಉಪಾಧ್ಯಕ್ಷರ ಸ್ಥಾನಕ್ಕೆ ಆದರಲ್ಲೂ ಒಬ್ಬ ಮಹಿಳೆಯನ್ನು ಈ ಸ್ಥಾನಕ್ಕೆ ಆರಿಸಿದ್ದ ಬಗ್ಗೆ ನಾನು ನನ್ನ ಸಂತೋಷವನ್ನು ವ್ಯಕ್ತಪಡಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ವಿ. ಜನಾಲಿ (ಗುಳೇದಗುಡ್ಡ).—ಮಾನ್ಯ ಅಧ್ಯಕ್ಷರೇ, ಈವತ್ತಿನದಿವಸ ನಾನು ಮಾತ ನಾಡತಕ್ಕಂಥ ಸಂದರ್ಭದಲ್ಲಿ ಒಂದು ಕನ್ನಡ ಪದ್ಯ ನನ್ನ ನೆನಪಿಗೆ ಬರುತ್ತದೆ; ಅದು ಈರೀತಿ ಇದೆ:—

‘ತಂಗಿ ಯಿದ್ದರೆ ಯಿರಬೇಕ;
ಯಂತಾಕಿ...
ಕಿತ್ತೂರ ಚೆನ್ನಮ್ಮನಂತಾಕಿ ;
ಮುಖ್ಯಮುಂತ್ರಿಗಳಿದ್ದರೆ ಇರಬೇಕು,
ಎಂತವರ ;
ಬಡವರ ಬಂಧು ದೇವರಾಜ ಅರಸರಂತವರ ;
ಸಭಾಪತಿ ಯಿದ್ದರ ಯಿರಬೇಕ ;
ಯಂತವರ ;
ಶ್ರೀ ವೆಂಕಟರಮಣನಂತವರ ;
ಉಪಸಭಾಪತಿ ಯಿದ್ದರ ಯಿರಬೇಕು ;
ಯಂತವರ ;
ಶ್ರೀಮತಿ ಸುಮತಿ ಮಡಿಮನ್ನ ಅಂತವರ ;
ತಂಗಿ ಯಿದ್ದರ ಯಿರಬೇಕ ;
ಕಿತ್ತೂರ ಚೆನ್ನಮ್ಮನಂತವರ ;

ಇಲ್ಲಿ ಈ ಮೂಪರ ಹೆಸರುಗಳನ್ನು ತೆಗೆದುಕೊಂಡು ವಿಚಾರ ಮಾಡಿದರೆ, ನನಗೆ ತಡೆಯಲಾರದ ಆನಂದ ಉಂಟಾಗಿರುತ್ತದೆ. ಏತಕ್ಕೆಂದರೆ ನಮ್ಮ ಮಾನ್ಯ ಮುಖ್ಯ ಮುಂತ್ರಿಗಳು ಕರ್ನಾಟಕ ಇತಿ ಹಾಸದಲ್ಲೇ ಒಂದು ಅಪೂರ್ವವಾದ ಕೆಲಸವನ್ನು ಮಾಡಿರುತ್ತಾರೆ. ಹಿಂದುಳಿದ ಸಮಾಜವೆಂದು ಏನು ಹೇಳುತ್ತೇವೆ, ಆ ಒಂದು ಸಮಾಜದ ಒಬ್ಬ ವ್ಯಕ್ತಿಯನ್ನು ಸಭಾಪತಿಯನ್ನಾಗಿ ಮಾಡಿ ಸಮಾಜವಾದ ವನ್ನು ಅವರು ಎತ್ತಿಹಿಡಿದಿದ್ದಾರೆ. ಆದರಂತೆ ಹೆಣ್ಣುಮಕ್ಕಳಿಗೆ ಸಮಾಜದಲ್ಲಿ ಪ್ರಾಶಸ್ತ್ಯವನ್ನು ಕೊಡ ಬೇಕೆಂಬ ದೃಷ್ಟಿಯಿಂದ ಒಬ್ಬ ಹೆಣ್ಣುಮಗಳಿಗೆ ಉಪಸಭಾಪತಿಯ ಸ್ಥಾನವನ್ನು ಕೊಡುವ ಮುಖಾಂತರ ಯೋಗ್ಯ ಕೆಲಸವನ್ನು ಮಾಡಿರುತ್ತಾರೆ. ಇದನ್ನೆಲ್ಲ ನೋಡಿದಾಗ ಮಾನ್ಯ ಮುಖ್ಯಮಂತ್ರಿಗಳನ್ನು ಬಡವರ ಬಂಧು ಎಂದರೆ ತಪ್ಪಾಗಲಾರದು. ಶ್ರೀಮತಿ ಸುಮತಿ ಮಡಿಮನ್‌ರವರ ಬಗ್ಗೆ ಹೇಳುವುದಾದರೆ

ಸುಮತಿ ''ಸು'' ಎಂದರೆ ಒಳ್ಳೆಯ ''ಮತಿ'' ಎಂದರೆ ಬುದ್ಧಿಯನ್ನು ಹೊಂದಿರತಕ್ಕಂಥವರನ್ನು ಈ ಒಂದು ಉನ್ನತವಾದ ಸ್ಥಾನಕ್ಕೆ ಆರಿಸಿರುವುದಕ್ಕೆ ನನಗೆ ತುಂಬಾ ಸಂತೋಷವಾಗಿದೆ. ಈವತ್ತು ಬಡವರ ಸೇವೆ. ಬಡವರ ಕಲ್ಯಾಣ ಮಾಡಬೇಕು ಎನ್ನುವುದನ್ನು ಕಂಡುಕೊಂಡ ಮಾನ್ಯ ಮುಖ್ಯ ಮಂತ್ರಿಗಳು 'ಮನಸ್ಸಿದ್ದಂತೆ ಮಹಾದೇವ'' ಎಂದು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಶ್ರೀಮತಿ ಸುಮತಿ ಮಡಿಮನ್‌ರವರಿಗೆ ದೇವರು ಒಳ್ಳೆಯದು ಸ್ಥಾನವನ್ನು ಕೊಟ್ಟಿರುತ್ತಾನೆ. ಅವರು ಬಡವರ ಸೇವೆಯನ್ನು ಮಾಡುವ ಮೂಲಕ ಅವರ ಕೀರ್ತಿ ಎಲ್ಲ ದಿಕ್ಕುಗಳಲ್ಲಿಯೂ ಬೆಳೆಗಲಿ ಎಂದು ಹಾರೈಸಿ ದೇವರು ಅವರಿಗೆ ಆಯುರಾರೋಗ್ಯವನ್ನು ಕೊಟ್ಟು ಕಾಪಾಡಲಿ ಎಂದು ಕೇಳಿಕೊಂಡು ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

೪–೦೦ ಪಿ. ಎಂ.

ಶ್ರೀಮತಿ ಪಿ. ನಾಗಮ್ಮ ಕೇಶವಮೂರ್ತಿ (ಮಾಯಕೊಂಡ).—ಮಾನ್ಯ ಅಧ್ಯಕ್ಷರೇ, ನಮ್ಮ ನಾಯಕರು ಹಿಂದಿನ ಒಂದು ಅವಧಿಯಲ್ಲಿ ಈ ಹೌಸಿನ ಒಂದು ಸ್ವೀಕರ್ ಸ್ಥಾನಕ್ಕೆ ಒಬ್ಬ ಹೆಣ್ಣು ಮಗಳನ್ನು ಆರಿಸಿ ಹೊಸ ದಾಖಲೆಯನ್ನು ಉಂಟು ಮಾಡಿದರು. ಅದೇರೀತಿಯಾಗಿ ಈವೊತ್ತಿನ ದಿವಸ ಡೆಪ್ಯೂಟೀ ಸ್ಪೀಕರ್ ಸ್ಥಾನವನ್ನು ಒಬ್ಬ ಮಹಿಳೆಗೆ ಕೊಟ್ಟು ಆ ದಾಖಲೆಯನ್ನೆ ಮುಂದುವರೆಸಿಕೊಂಡು ಹೋಗಿದ್ದಾರೆ ಎಂದು ಹೇಳಂವುದಕ್ಕೆ ನಾನು ಇಷ್ಟಪಡುತ್ತೇನೆ. ಶ್ರೀಮತಿ ಸುಮತಿ ಮಡಿಮನ್‌ರವರು ಮತ್ತು ನಾವು ಒಟ್ಟಿಗೆ ಸೇರಿ ೬ ವರ್ಷದಿಂದಲೂ ಕೆಲಸ ಮಾಡಿಕೊಂಡು ಬಂದಿದ್ದೇವೆ. ಅವರ ಬಗ್ಗೆ ಹೇಳ ಬೇಕಾದರೆ ಅವರು ಮಹಿಳೆಯರ ಮತ್ತು ಮಕ್ಕಳ ವಿಚಾರದಲ್ಲಿ ಹೆಚ್ಚು ಆಸಕ್ತಿ ವಹಿಸುತ್ತಾ ಇದ್ದರು. ಅಷ್ಟೇ ಅಲ್ಲದೆ, ಅವರು ಒಂದು ಕರ್ತವ್ಯ ನಿಷ್ಠೆಯಿಂದ ಮತ್ತು ಕಾರ್ಯತತ್ಪರತೆಯಿಂದ ಈ ಸ್ಥಾನವನ್ನು ಗಳಿಸಿಕೊಂಡಿದ್ದಾರೆಂದು ತಪ್ಪಾಗಲಾರದು, ನಮಗೂ ಅವರಿಗೂ likeminded ಇದ್ದುದರಿಂದ ಸದೂಾಜದಲ್ಲಿ ಹೆಚ್ಚಿನ ಆಸಕ್ತಿ ಇಟ್ಟುಕೊಂಡು ಎಷ್ಟೋ ವಿಷಯಗಳನ್ನು ಅವರೊಂದಿಗೆ ನಾವು ಚರ್ಚಿಸುತ್ತಾ ಇದ್ದೆವು, ಅದರಂತೆ ಕೆಲಸವನ್ನೂ ಸಹ ಮಾಡಿಕೊಂಡಾ ಹೋಗುತ್ತಾ ಇದ್ದೆವು. ಅವರು ನಮಗೆ ಹಿರಿಯ ಅಕ್ಕನಾಗಿ ಮಾರ್ಗದರ್ಶನ ತೋರಿಸುತ್ತಾ ಇದ್ದರು. She is a friend and philosopher and guide, ಎಂದರೆ ತಪ್ಪಾಗಲಾರದು. ಇಂಥಾ ಒಂದು ಸ್ಥಾನ ಅವರಿಗೆ ಸಿಕ್ಕಿರುವುದು ನಮ್ಮ ಮಹಿಳಾ ಜನಾಂಗಕ್ಕೆ ಬಹಳ ಸಂತೋಷವಾಗಿದೆ ಎಂದು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಶೇಕಡಾ ೫೦ ಭಾಗ ಇರತಕ್ಕಂಥಾ ಮಹಿಳೆಯರ ಪರವಾಗಿ ಒಂದು ಸೂಕ್ತವಾದಂಥಾ ಸ್ಥಾನವನ್ನು ಅವರಿಗೆ ಕಲ್ಪಿಸಿಕೊಟ್ಟಿದ್ದಾರೆ ಅವರಿಗೆ ಇನ್ನೂ ಹೆಚ್ಚಿನ ಅವಕಾಶಗಳನ್ನು ದೇವರು ಒದಗಿಸಿಕೊಡಲಿ ಎಂದು ಹಾರೈಸುತ್ತೇನೆ.

SMT. SUMATI B. MADIMAN (Deputy Speaker)— Mr. Speaker, Sir, and hon. Members of this House: At the outset I should say I am overwhelmed with the feelings that have been expressed by my colleagues. As you know, I have always devoted my life to the needy; specially 'women and children' is the subject of my heart. When I was told that I would be made the Deputy Speaker, for a minute I hesitated thinking that I would not be able to serve my sisters Later on I become reconciled when I was told that I would have more opportunities to help them and that I could go on with my social activities. All the same, as Sri Arumugham said, I wondered for a minute whether I would like to sit in the Chair and go on listening to members talking for hours together, I fel that when the members have reposed confidence and faith in me, I could not let them down because even in the Assembly you need persons who can conduct the affairs well. I am really grateful and thankful to you have appreciated the way I have conducted while I was in the Chair and I also thank you for assuring me that I will get all the co-operation from both sides. I may also

assure that when I am in the Chair I will be impartial and treat every member here alike. I hope men would not mind if I just say a few words about them. Whenever I am in the midst of men, whether in the Chair or in the debate, I am always reminded of little boys who have grown up because the man I found is still a boy at heart. Once you know the knack of tackling them properly, they will never create trouble. (Interruption) Being a mother, I can also deal with naughty boys. It is a fact that women belong to the weaker section but I would like to say that a woman in India is treated as shakthi and if this shakthi has been channelised properly,our country will be the best and wonderful country in the whole Universe. It is a pity that women have been neglected so far and they have not been given an opportunity to bring out whatever talen or whatever good is in them. Then have always been kept a said. they have been pushed into the kitchen and they have been pushed out of sight of what is going on in this world. I would thank the Chief Minister for having given me this opportunity to conduct the affairs of this House and I promise you, Sir, that I will conduct it properly and to the best of my ability. At the same time I would appeal to all members to give me their full co-operation because I have promised that I will treat you all equally.

The Hon. Speaker has been very kind and given me opportunities to be in the Chair and conduct the affairs of the House, I thank the Hon. Speaker for having been so kind to me.

MR. SPEAKER —I am very happy to associate myself with the sentiments expressed by the Hon. Chief Minister the Hon. Leader of the Opposition and other members of this House. I have seen her activities as the General Secretary of the Karnataka Pradesh Congress Committee. She was taking very keen interest in organisational matters. Her feelings are always for the poor and she is very courteous and a disciplined soldier. During the short time I have observed her performance in this House I am happy to say that her performance has been excellent and many members have appreciated her performance. I assure her my co-operation in discharging her functions as Deputy Speaker. I also congratulate her for having been elected as the Deputy Speaker of the Karnataka Legislative Assembly and I assure her all success.

Karnataka State Civil Services Bill 1978.
Introduction

SRI D. DEVARAJ URS.—Sir, I beg to move:

"That leave be granted to introduce the Karnataka State Civil Services Bill, 1978."